**ಪಾಠ–4** **ಜನವರಿ 18–24**

# ಆವಿಗೆಯಿಂದ ಅರಮನೆಗೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ದಾನಿಯೇಲ 3ನೇ ಅಧ್ಯಾಯ ಪ್ರಕಟನೆ 13:11–18, ವಿ.ಕಾಂಡ 20:3–6, ಧ.ಕಾಂಡ 6:4 ಮತ್ತು 1 ಕೊರಿಂಥ 15:12–26, ಇಬ್ರಿಯ 11ನೇ ಅಧ್ಯಾಯ.

**ಸ್ಮರಣವಾಕ್ಯ : "ಅರಸೇ, ನಾವು ಸೇವಿಸುವ ದೇವರಿಗೆ ಚಿತ್ತವಿದ್ದರೆ ಆತನು ಧಗಧಗನೆ ಉರಿಯುವ ಆವಿಯೊಳಗಿಂದ ನಮ್ಮನ್ನು ಬಿಡಿಸಬಲ್ಲನು; ಹೇಗೂ ನಿನ್ನ ಕೈಯಿಂದ ನಮ್ಮನ್ನು ಬಿಡಿಸುವನು (ದಾನಿಯೇಲ 3:17).**

ಈ ಯೌವನಸ್ಥರು ಪರಿಶುದ್ಧಾತ್ಮನಿಂದ ಸ್ಫೂರ್ತಿ ಹೊಂದಿದವರಾಗಿ ತಾವು ಯಾವಾತನನ್ನು ಆರಾಧಿಸುತ್ತಿದ್ದರೋ ಆತನೇ ನಿಜವಾದ ಮತ್ತು ಜೀವಿಸುವ ದೇವರೆಂದು ಇಡೀ ದೇಶಕ್ಕೆ ತಮ್ಮ ನಂಬಿಕೆಯನ್ನು ಪ್ರಕಟಪಡಿಸಿದರು. ತಮ್ಮ ಸ್ವನಂಬಿಕೆಯ ಪ್ರತ್ಯಕ್ಷ ಪ್ರಕಟನೆಯು ತಮ್ಮ ಪ್ರಾಮಾಣಿಕತೆಯ ಸವಿವರವಾದ ಮಂಡನೆಯಾಗಿತ್ತು. ದೇವರಶಕ್ತಿ ಮತ್ತು ಮಹತ್ವಗಳ ಪ್ರಭಾವ ವಿಗ್ರಹಾರಾಧಕರ ಮೇಲೆ ಆಗಬೇಕಾದರೆ ಮೊದಲು ಆತನ ಸೇವಕರು ಆತನಿಗೆ ಭಕ್ತಿಯನ್ನು ಪ್ರಕಟಪಡಿಸಬೇಕು. ಅವರು ತಮ್ಮ ಗೌರವಕ್ಕೂ ಆರಾಧನೆಗೂ ಪಾತ್ರನಾದವನು. ದೇವರೊಬ್ಬನೆ ಆಗಿದ್ದು ತಮ್ಮ ಸ್ವಂತ ಜೀವದ ಸಂರಕ್ಷಣೆಯಾಗಲೀ ಮತ್ಯಾವ ಪ್ರತಿಫಲವಾಗಲೀ ತಮ್ಮನ್ನು ವಿಗ್ರಹಾರಾಧನೆಗೆ ಕನಿಷ್ಠವಾಗಿಯೂ ಪ್ರೇರೇಪಿಸಲಾರವು ಎಂಬುದನ್ನು ತೋರಿಸಬೇಕಾಗಿತ್ತು. ಈ ಪಾಠಗಳು ಅಂತ್ಯಕಾಲದಲ್ಲಿ ನಮ್ಮ ಅನುಭವಕ್ಕೆ ನೇರವಾದ ಮತ್ತು ಪ್ರಮುಖವಾದ ಪರಿಣಾಮವನ್ನು ಬೀರುವವು"

– ಎಲೆನ್ ಜಿ ವೈಟಮ್ಮನವರ ಇನ್ ಹೆವೆನ್ಲೀ ಪ್ಲೇಸಸ್ ಪುಸ್ತಕದ 149ನೇ ಪುಟ. ವೈಜ್ಞಾನಿಕ ಪೂರ್ವ ಮೂಡನಂಬಿಕೆಗಳ ಕಾಲದಲ್ಲಿ ಆರಾಧನೆಯ ವಿಷಯದಲ್ಲಿ ಬೆದರಿಕೆಯನ್ನು ಎದುರಿಸುತ್ತಿದ್ದಂತೆ ಕಡೆಯ ಕಾಲದಲ್ಲಿ ಲೋಕವು ಬಹಳ ಮುಂದುವರೆದಿರುವಾಗ ಇದೇ ರೀತಿಯ ಸನ್ನಿವೇಶ ಲೋಕದಾದ್ಯಂತ ತೆರೆದುಕೊಳ್ಳುತ್ತದೆ. ಹಾಗಾಗಿ ಕಥೆಯನ್ನು ಅಧ್ಯಯನ ಮಾಡುವಾಗ ಇದು ದೇವರ ವಾಕ್ಯಾನುಸಾರವಾಗಿ ದೇವರಿಗೆ ನಂಬಿಗಸ್ತರಾದವರು ಎದುರಿಸುವ ಪ್ರಕರಣಗಳ ಅಂತರ್‌ದೃಷ್ಟಿಯನ್ನು ಪಡೆಯುತ್ತೇವೆ.

**ಭಾನುವಾರ** **ಜನವರಿ 19**

## ಬಂಗಾರದ ಪ್ರತಿಮೆ

ದಾನಿಯೇಲ 3:1–7ನೇ ವಚನಗಳನ್ನು ಓದಿರಿ. ಈ ಪ್ರತಿಮೆಯನ್ನು ಮಾಡುವಂತೆ ರಾಜನಿಗೆ ಯಾವ ಪ್ರೇರೇಪಣೆಯಾಗಿರಬಹುದು?

ಕನಸಿಗೂ ಬಂಗಾರದ ಪ್ರತಿಮೆಯನ್ನು ಮಾಡಿಸಿದ ಸಂದರ್ಭಕ್ಕೂ ಮಧ್ಯೆ ಕೆಲವು ದಿನಗಳು ಗತಿಸಿದ್ದವು. ಆದಾಗ್ಯೂ ರಾಜನು ಈ ಕನಸನ್ನು ಬ್ಯಾಬಿಲೋನು ಅವನತಿ ಹೊಂದಿದ ಮೇಲೆ ಅದರ ಸ್ಥಳದಲ್ಲಿ ಬೇರೆ ರಾಜ್ಯಗಳು ಬರುತ್ತವೆ ಎಂಬುದನ್ನು ಮರೆತಿರಲಿಲ್ಲವೆಂದು ಅನ್ನಿಸುತ್ತದೆ. ನೆಬೂಕದ್ನೆಚ್ಚರನಿಗೆ ತಾನು ಬಂಗಾರದ ತಲೆಯಾಗಿರುವುದು ತೃಪ್ತಿಯಾಗಲಿಲ್ಲ. ಇಡೀ ಪ್ರತಿಮೆಯೇ ಬಂಗಾರದ್ದಾಗಿರಬೇಕು, ಚರಿತ್ರೆಯಲ್ಲಿ ತನ್ನ ರಾಜ್ಯವು ಶಾಶ್ವತವಾಗಿ ಉಳಿಯಬೇಕು ಎಂಬುದನ್ನು ತನ್ನ ಪ್ರಜೆಗಳಿಗೆ ತಿಳಿಸಬೇಕೆಂದು ಅಂದುಕೊಂಡನು.

ಇವನ ಈ ಧೋರಣೆಯು ದೇವರಿಗೆ ಸವಾಲು ಹಾಕಿ ಉದ್ಧಟತನದಿಂದ ಬ್ಯಾಬೆಲ್ ಗೋಪುರವನ್ನು ಕಟ್ಟುತ್ತಿದ್ದವರನ್ನು ನೆನಪಿಸುತ್ತದೆ, ಇಲ್ಲಿ ನೆಬೂಕದ್ನೆಚ್ಚರನಾದರೂ ಕಡಿಮೆ ಉದ್ಧಟನಾಗಿರಲಿಲ್ಲ. ಆತನು ಬಾಬಿಲೋನನ್ನು ಆಳುವವನಾಗಿ ಬಹಳಷ್ಟು ಸಾಧನೆ ಮಾಡಿದ್ದನು. ತನ್ನ ರಾಜ್ಯವು ಕಡೆಯಲ್ಲಿ ಅಳಿದು ಹೋಗುತ್ತದೆ ಎಂಬ ಯೋಚನೆಯಲ್ಲಿ ಜೀವಿಸುವುದು ಅವನಿಂದಾಗಲಿಲ್ಲ. ಹಾಗಾಗಿ ಆತನು ತನ್ನನ್ನು ತಾನು ಹೆಚ್ಚಿಸಿಕೊಳ್ಳುವ ಪ್ರಯತ್ನದಲ್ಲಿ ತನ್ನ ಅಧಿಕಾರವನ್ನು ಉನ್ನತೀಕರಿಸಲು ಅದರಿಂದ ತನ್ನ ಪ್ರಜೆಗಳ ನಿಷ್ಠೆಯನ್ನು

ಅಳೆಯಲು ಒಂದು ಪ್ರತಿಮೆಯನ್ನು ಮೂಡಿಸಿದನು. ಈ ಪ್ರತಿಮೆಯ ರಾಜನನ್ನೋ ಅಥವಾ ದೇವತೆಗಳನ್ನೋ ಪ್ರತಿಬಿಂಬಿಸುತ್ತದೆಂದು ತಿಳಿದು ಬರುವುದಿಲ್ಲ, ಹಳೆಯ ಕಾಲದಲ್ಲಿ ರಾಜಕೀಯ ಮತ್ತು ಧರ್ಮವನ್ನು ಪ್ರತ್ಯೇಕಪಡಿಸುವ ಗೆರೆಯು ಮಸುಕಾಗಿರುತ್ತಿತ್ತು. ನೆಬೂಕದ್ನೆಚ್ಚರನಿಗೆ ನಿಜವಾದ ದೇವರ ಪರಿಚಯವಾಗಲು ಎರಡು ಅವಕಾಶಗಳು ಒದಗಿಬಂದವೆಂದು ನೆನಪು ಮಾಡಿಕೊಳ್ಳೋಣ. ಮೊದಲನೆಯದಾಗಿ ಆತನು ಇಬ್ರಿಯ ಯೌವನಸ್ಥರನ್ನು ಪರೀಕ್ಷೆ ಮಾಡಿದಾಗ ಅವರು ಅವನ ರಾಜ್ಯದಲ್ಲಿ ಇನ್ನುಳಿದ ಎಲ್ಲಾ ವಿದ್ವಾಂಸರಿಗಿಂತ ಹತ್ತುಪಟ್ಟು ಬುದ್ಧಿವಂತರಾಗಿ ಕಂಡುಬಂದರು. ಎರಡನೆಯದಾಗಿ ಪಂಡಿತರೂ ಆತನ ಕನಸನ್ನು ಹೇಳಲಾರದೆ ಹೋದಾಗ ದಾನಿಯೇಲನಾದರೂ ಆ ರಾತ್ರಿಯಲ್ಲಿ ಅವನಿಗಿದ್ದ ಆಲೋಚನೆಗಳನ್ನೂ, ಕನಸನ್ನೂ ಅದರ ಅರ್ಥವನ್ನೂ ತಿಳಿಯಪಡಿಸಿದನು. ಅಂತಿಮವಾಗಿ ರಾಜನು ದಾನಿಯೇಲನ ದೇವರ ಹಿರಿಮೆಯನ್ನು ಗುರುತಿಸಿದನು. ಆದರೆ ಸಾಕಷ್ಟು ಆಶ್ಚರ್ಯಕರವಾಗಿ ತೋರುವುದೇನೆಂದರೆ ಪಾಠಗಳು ಅವನನ್ನು ವಿಗ್ರಹಾರಾಧನೆಯಿಂದ ತಡೆಗಟ್ಟಲಿಲ್ಲ ಯಾಕೆ? ಬಹುಶಃ ಅವನಲ್ಲಿದ್ದ ಗರ್ವವು ಅವನನ್ನು ಹಾಗೆ ಮಾಡಿಸಿತು. ಪಾಪಪೂರಿತನಾದ ಮನುಷ್ಯನು ತನ್ನ ಭೌತಿಕ ಮತ್ತು ಬೌದ್ಧಿಕ ಸಾಧನೆಗಳು ಕೇವಲ ವ್ಯರ್ಥವಾದವುಗಳು, ಅಳಿದು ಹೋಗುತ್ತವೆಂಬ ಮನವರಿಕೆಯನ್ನು ಪ್ರತಿರೋಧಿಸುತ್ತಾನೆ. ಅನೇಕ ಸಲ ನಾವೂ ಸಹ "ಮರಿ ನೆಬೂಕದ್ನೆಚ್ಚರನಂತೆ" ಆಡುತ್ತೇವೆ. ನಮ್ಮ ಸಾಧನೆಗಳು ಬಹಳ ಗಮನ ಕೊಡುತ್ತೇವೆ. ಇವು ನಿತ್ಯತ್ವದ ಎದುರು ಎಷ್ಟು ಅರ್ಥಹೀನವೆಂಬುದನ್ನು ಮರೆತುಬಿಡುತ್ತೇವೆ.

ನಾವು ನೆಬೂಕದ್ನೆಚ್ಚರನು ಬಿದ್ದ ಬಲೆಗೆ ಬಹಳ ನಿಗೂಢವಾದವುಗಳಲ್ಲಿಯೂ ಬೀಳದಂತೆ ಹೇಗೆ ಕಲಿಯಬಹುದು?

**ಸೋಮವಾರ** **ಜನವರಿ 20**

## ಆರಾಧನೆಗೆ ಕರೆ

ಓದಿರಿ : ದಾನಿಯೇಲ 3:8–15 ಮತ್ತು ಪ್ರಕಟನೆಗಳು 13:11–18. ದಾನಿಯೇಲನ ಕಾಲದಲ್ಲಿ ಏನಾಯ್ತು ಮತ್ತು ಅಂತ್ಯಕಾಲದಲ್ಲಿ ಏನಾಗುತ್ತದೆಂಬುವುಗಳ ನಡುವೆ ಇರುವ ಸಾದೃಶ್ಯವೇನು?

ದೂರಾಬೈಲಿನಲ್ಲಿ ನಿಲ್ಲಿಸಲಾದ ಬಂಗಾರದ ಪ್ರತಿಮೆಯ ಹೆಸರು ಅಕ್ಕಾಡಿಯ ಎಂಬುದಾಗಿತ್ತು. ಇದರ ಅರ್ಥ ಗೋಡೆಗಳ ಮಧ್ಯೆವಿರುವ ಸ್ಥಳ" ಎಂಬುದಾಗಿದ್ದು ವಿಶಾಲವಾದ ದೇವದರ್ಶನ ಗುಡಾರವನ್ನು ನೆನಪಿಸುವಂತಿತ್ತು. ಇವು ಸಾಲದೆಂಬಂತೆ ಹತ್ತಿರದಲ್ಲಿದ್ದ ಧಗಧಗನೆ ಉರಿಯುವ ಆವಿಗೆಯು ಯಜ್ಞವೇದಿಯನ್ನು ಹೋಲುತ್ತಿತ್ತು. ಬ್ಯಾಬಿಲೋನಿನ ವಾದ್ಯಸಂಗೀತ ಸಾರ್ವಜನಿಕ ದೇವಾರಾಧನೆಯ ಭಾಗವಾಗಿತ್ತು. ಇಲ್ಲಿ ಪೂಜಾ ವಿಧಿಯ ಪರಿಪೂರ್ಣತೆಯನ್ನು ಪರಿಣಾಮವನ್ನೂ ಮುಟ್ಟಿಸುವುದಕ್ಕೋಸ್ಕರ ಎಂಬಂತೆ ಏಳು ವಿಧದ ವಾದ್ಯಗಳನ್ನು ಪಟ್ಟಿ ಮಾಡಲಾಗಿದೆ.

ಇಂದು ನಾವು ಹೊಸ ಜೀವನಶೈಲಿಯನ್ನು, ಹೊಸ ಆಲೋಚನೆಗಳನ್ನು ಅಳವಡಿಸಿಕೊಳ್ಳಬೇಕೆಂಬ ದೇವರ ವಾಕ್ಯದಲ್ಲಿರುವಂತೆ ಅವನ ಅಧಿಕಾರಕ್ಕೆ ಬದ್ಧರಾಗುವುದನ್ನು ತ್ಯಜಿಸಬೇಕೆಂದು ಸಮಾಕಾಲೀನ ಬ್ಯಾಬಿಲೋನಿನ ಆಡಳಿತಗಾರರಿಗೆ ನಿಷ್ಠರಾಗಿರಬೇಕೆಂತಲೂ ಕರೆಗಳು ನಮ್ಮನ್ನು ಎಲ್ಲಾ ಕಡೆಯಿಂದಲೂ ಪೀಡಿಸುತ್ತಲಿವೆ. ಅನೇಕ ಸಲ ಈ ಲೋಕದ ಆಕರ್ಷಣೆಗಳು ನಮ್ಮನ್ನು ಮೂಕಗೊಳಿಸುತ್ತವೆ, ಆದರೆ ನಮ್ಮ ಅಂತಿಮ ನಿಷ್ಠೆಯು ನಮ್ಮ ಸೃಷ್ಟಿಕರ್ತನಾದ ದೇವರಿಗೆ ಮಾತ್ರವೆಂದು ಜ್ಞಾಪಿಸಿಕೊಳ್ಳಬೇಕು.

ಪ್ರವಾದನಾ ಕಾಲಮಾನದ ಪ್ರಕಾರ ನಾವು ಲೋಕದ ಚರಿತ್ರೆಯ ಕಡೆಯ ದಿನಮಾನಗಳಲ್ಲಿ ವಾಸಿಸುತ್ತಿದ್ದೇವೆ. ಪ್ರಕಟನೆ 13ನೇ ಅಧ್ಯಾಯದಲ್ಲಿ ಭೂನಿವಾಸಿಗಳು ಮೃಗದ ವಿಗ್ರಹವನ್ನು ಪೂಜಿಸುವಂತೆ ಕರೆಯಲ್ಪಡುತ್ತಾರೆ. ದೊಡ್ಡವರು ವಿಗ್ರಹವನ್ನು ಪೂಜಿಸುವಂತೆ ಬಡವರು ಸ್ವತಂತ್ರರು ದಾಸರು ಎಲ್ಲರೂ ತಮ್ಮ ತಮ್ಮ ಬಲಗೈಯ ಮೇಲಾಗಲೀ ಹಣೆಯ ಮೇಲಾಗಲೀ ಗುರುತು ಹೊಂದಬೇಕೆಂದು ಕರೆಯಲ್ಪಡುತ್ತಾರೆ (ಪ್ರಕ 13:16).

ಆರು ವರ್ಗಕ್ಕೆ ಸೇರಿದ ಜನರು ಮೃಗದ ವಿಗ್ರಹಕ್ಕೆ ತಮ್ಮ ನಿಷ್ಠೆಯನ್ನು ನೀಡುತ್ತಾರೆಂದು ಹೇಳಲ್ಪಟ್ಟಿದೆ: ಚಿಕ್ಕವರು, ದೊಡ್ಡವರು, ಐಶ್ವರ್ಯವಂತರು ಮತ್ತು ಬಡವರು, ಸ್ವತಂತ್ರರು ಮತ್ತು ದಾಸರು ಆ ಮೃಗದ ಗುರುತು 666 ಆಗಿದ್ದು ಸಂಖ್ಯೆ 6ಕ್ಕೆ ಹೆಚ್ಚು ಒತ್ತುಕೊಡುತ್ತದೆ. ಅಂತಿಮಗತಿಯನ್ನು ಸಾರುವ

ಇಂದಿನ ಬ್ಯಾಬಿಲೋನು ಕಡೆಯ ದಿನಗಳಲ್ಲಿ ಏನು ಮಾಡುತ್ತದೆಂಬುದಕ್ಕೆ ನೆಬೂಕದ್ನೆಚ್ಚರನು ನಿಲ್ಲಿಸಿದ ಪ್ರತಿಮೆಯ ನಿದರ್ಶನ ರೂಪವಾಗಿದೆ (ದಾನಿ 3:1ರ ಪ್ರತಿಮೆಯ ಗಾತ್ರ 60 ಮತ್ತು 6 ಆಗಿದೆ). ಆದುದರಿಂದ ಈ ಕಡೆಯಲ್ಲಿ ಏನು ಘಟಿಸುತ್ತದೆಂಬುದಕ್ಕೆ ಮತ್ತು ದೇವರು ಹೇಗೆ ಈ ಲೋಕದ ವ್ಯವಹಾರವನ್ನು ಮುನ್ನಡೆಸುತ್ತಾನೆಂಬುದಕ್ಕೆ ಹೆಚ್ಚಿನ ಗಮನವನ್ನು ನೀಡಬೇಕು.

ಆರಾಧಿಸುವುದೆಂದರೆ ನಾವು ಕೇವಲ ಯಾವುದಾದರೂ ವಸ್ತುವಿನ ಮುಂದೆ ಇಲ್ಲವೇ ವ್ಯಕ್ತಿಯ ಮುಂದೆ ತಲೆಬಾಗಿಸಿ ಮುಂದೆ ಮುಕ್ತವಾಗಿ ನಮ್ಮ ಅಂತಿಮ ನಿಷ್ಠೆಯನ್ನು ತೋರಿಸುವುದಲ್ಲ. ನಾವು ದೇವರನ್ನು ಆರಾಧಿಸದೆ ಮತ್ತೊಂದನ್ನು ಆರಾಧಿಸುವ ನಿಗೂಢವಾದ ವಿಧಗಳಾವುವು?

**ಮಂಗಳವಾರ** **ಜನವರಿ 21**

## ಬೆಂಕಿಯ ಪರೀಕ್ಷೆ

ರಾಜನು ಮೂವರು ಇಬ್ರಿಯರ ಮೇಲೆ ತಾನು ನಿಲ್ಲಿಸಿದ ಪ್ರತಿಮೆಯನ್ನು ಆರಾಧಿಸುವಂತೆ ಹೇರಿದುದು ಯೆರೂಸಲೇಮಿನ ದೇವಾಲಯದ ಆರಾಧನೆಗೆ ವಿರೋಧವಾಗಿತ್ತು. ಈ ಮೂವರು ತಮ್ಮ ಆರಂಭದ ವರ್ಷಗಳಲ್ಲಿ ಇದನ್ನು ಅನುಭವಿಸಿದ್ದರು. ಅವರು ಬ್ಯಾಬಿಲೋನ್ ಸಂಸ್ಥಾನದಲ್ಲಿ ಅಧಿಕಾರಿಗಳಾಗಿ ರಾಜನಿಗೆ ನಿಷ್ಠರಾಗಿದ್ದಾಗ್ಯೂ ತಮ್ಮ ದೇವರ ಮೇಲೆ ಅವರಿಗಿದ್ದ ನಿಷ್ಠೆಯು ಮಾನವರ ಮೇಲಿನ ನಿಷ್ಠೆಗೆ ಒಂದು ಮಿತಿ ಹಾಕಿತ್ತು. ಅವರು ರಾಜನನ್ನು ಸೇವಿಸಿ ನಂಬಿಗಸ್ತ ಆಡಳಿತಗಾರರಾಗಿ ಮುಂದುವರೆಯಲು ಸಿದ್ಧರಾಗಿದ್ದರು. ಆದಾಗ್ಯೂ ಅವರು ಉತ್ಸವದಲ್ಲಿ ಭಾಗಿಗಳಾಗಲು ಇಷ್ಟಪಡಲಿಲ್ಲ.

ಓದಿರಿ : ವಿ.ಕಾಂಡ 20:3–6 ಮತ್ತು ಧ.ಕಾಂಡ 6:4. ಈ ಮೂವರು ತೆಗೆದುಕೊಂಡ ನಿಲುವಿಗೆ ಈ ವಚನಗಳು ಖಂಡಿತವಾಗಿಯೂ ಪ್ರಭಾವ ಬೀರಿವೆ ಎಂಬುದನ್ನು ನಮಗೆ ಹೇಗೆ ಮುಟ್ಟಿಸುತ್ತವೆ?

ಎಲ್ಲಾ ಜನರು ರಾಜನ ಆದೇಶದಂತೆ ಸಂಗೀತವಾದ್ಯಗಳು ಮೊಳಗುತ್ತಲೇ ಬಂಗಾರದ ಪ್ರತಿಮೆಗೆ ಅಡ್ಡಬಿದ್ದು ಪೂಜಿಸಬೇಕಾಗಿತ್ತು. ಕೇವಲ ಮೂವರು– ಶದ್ರಕ್, ಮೇಶಕ್, ಅಬೇದ್‌ನಿಗೂ ಮಾತ್ರ ರಾಜನಿಗೆ ಅವಿಧೇಯರಾಗಲು ಧೈರ್ಯ

ಮಾಡಿದರು. ಆ ಕೂಡಲೇ ಕೆಲವು ಬ್ಯಾಬಿಲೋನಿಯರು ಇದನ್ನು ರಾಜನ ಗಮನಕ್ಕೆ ತಂದರು. ಆರೋಪ ಮಾಡಿದವರು ರಾಜನಿಗೆ ಕೋಪ ಬರಿಸಲು ಯತ್ನಿಸಿದರು.

(1) ರಾಜನೇ ಈ ಮೂವರು ಯೌವನಸ್ಥರನ್ನು ಬ್ಯಾಬಿಲೋನ್ ಸಂಸ್ಥಾನಕ್ಕೆ ಅಧಿಕಾರಿಗಳನ್ನಾಗಿ ಮಾಡಿದ್ದನು; (2) ಯೆಹೂದ್ಯರು ರಾಜನ ದೇವತೆಗಳನ್ನು ಪೂಜಿಸುವುದಿಲ್ಲ ಮತ್ತು (3) ರಾಜನು ನಿಲ್ಲಿಸಿದ ಬಂಗಾರದ ಪ್ರತಿಮೆಯನ್ನು ಪೂಜಿಸುವುದಿಲ್ಲ (ದಾನಿಯೇಲ 3:12). ರಾಜನು ಉಗ್ರಕೋಪವುಳ್ಳವನಾದಾಗ್ಯೂ ಆ ಮೂವರಿಗೆ ಮತ್ತೊಂದು ಅವಕಾಶವನ್ನು ಕೊಟ್ಟನು. ರಾಜನು ಈ ಮೂವರು ಸರಿಯಾದ ಸ್ಥಾನಕ್ಕೆ ಹಿಂದಿರುಗಿ ವಿಗ್ರಹವನ್ನು ಪೂಜಿಸಲು ಸಾಧ್ಯವಾಗುವಂತೆ ಇಡೀ ಪೂಜಾವಿಧಾನವನ್ನು ಪುನರಾವರ್ತಿಸಲು ಸಿದ್ಧವಾಗಿದ್ದನು. ಒಂದು ವೇಳೆ ಅವರು ಅದಕ್ಕೆ ನಿರಾಕರಿಸಿದರೆ ಧಗಧಗನೆ ಉರಿಯುವ ಆವಿಗೆಗೆ ಎತ್ತಿಹಾಕಲ್ಪಡುತ್ತಿದ್ದರು ಮತ್ತು ನೆಬೂಕದ್ನೆಚ್ಚರನ ಮನವಿಯು ಅತಿ ಉದ್ಧಟತನದ ಹಕ್ಕೊತ್ತಾಯವು "ನಿಮ್ಮನ್ನು ನನ್ನ ಕೈಯೊಳಗಿಂದ ಬಿಡಿಸಬಲ್ಲ ದೇವರು ಯಾರು" ಎಂಬುದರಲ್ಲಿ ಮುಕ್ತಾಯುವಾಗುತ್ತಿತ್ತು (ದಾನಿ 3:15).

ಅಲೌಕಿಕವಾದ ಧೈರ್ಯ ಹೊಂದಿದ ಈ ಮೂವರು ತರುಣ ಯೆಹೂದ್ಯರು ರಾಜನಿಗೆ ಹೀಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದರು. "ಅರಸೇ, ನಾವು ಸೇವಿಸುವ ದೇವರಿಗೆ ಚಿತ್ತವಿದ್ದರೆ ಆತನು ಧಗಧಗನೆ ಉರಿಯುವ ಆವಿಗೆಯೊಳಗಿಂದ, ನಮ್ಮನ್ನು ಬಿಡಿಸಬಲ್ಲನು. ಹೇಗೂ ನಿನ್ನ ಕೈಯಿಂದ ನಮ್ಮನ್ನು ಬಿಡಿಸುವನು. ಚಿತ್ತವಿಲ್ಲದಿದ್ದರೂ ರಾಜನೇ ಇದು ನನಗೆ ತಿಳಿದಿರಲಿ ನಾವು ನಿನ್ನ ದೇವರುಗಳನ್ನು ಸೇವಿಸುವುದಿಲ್ಲ. ನೀನು ನಿಲ್ಲಿಸಿದ ಬಂಗಾರದ ಪ್ರತಿಮೆಯನ್ನು ಪೂಜಿಸುವುದಿಲ್ಲ ಎಂದು ಉತ್ತರ ಕೊಟ್ಟರು (ದಾನಿ 3:17,18).

ತಮ್ಮ ದೇವರು ತಮ್ಮನ್ನು ಬಿಡಿಸಬಲ್ಲನೆಂದು ತಿಳಿದಿದ್ದರೂ ಆತನು ಬಿಡಿಸೇ ಬಿಡಿಸುತ್ತಾನೆಂಬ ಖಾತ್ರಿ ಅವರಿಗಿರಲಿಲ್ಲ. ಆದಾಗ್ಯೂ ಅವರು ಬೆಂಕಿಯಲ್ಲಿ ಸುಟ್ಟುಹೋದರೂ ಸರಿಯೆ ರಾಜನಾಜ್ಞೆಗೆ ವಿಧೇಯರಾಗಲು ನಿರಾಕರಿಸಿದರು. ಇಂತಹ ನಂಬಿಕೆಯು ನಮಗೆ ಎಲ್ಲಿಂದ ಬರುತ್ತದೆ?

# ನಾಲ್ಕನೇ ಮನುಷ್ಯನು

ದಾನಿಯೇಲ 3:19–27 ವಚನಗಳನ್ನು ಓದಿರಿ. ಇಲ್ಲಿ ಏನಾಯಿತು? ಬೆಂಕಿಯಲ್ಲಿ ಕಾಣಿಸಿಕೊಂಡ ಆ ಇನ್ನೊಬ್ಬ ವ್ಯಕ್ತಿ ಯಾರು?

ನಂಬಿಗಸ್ತರಾದ ಇಬ್ರಿಯರನ್ನು ಉರಿಯುವ ಆವಿಗೆಗೆ ಹಾಕಿಸಿದ ರಾಜನು ಬೆಂಕಿಯಲ್ಲಿ ಮೂವರೊಟ್ಟಿಗೆ ನಾಲ್ಕನೆಯ ವ್ಯಕ್ತಿಯನ್ನು ನೋಡಿ ದಿಗಿಲು ಪಟ್ಟನು. ತನ್ನ ಬುದ್ಧಿಪೂರ್ವಕವಾಗಿ ಆ ನಾಲ್ಕನೇ ವ್ಯಕ್ತಿಯುನ್ನು ರಾಜನು 'ದೇವಕುಮಾರನೆಂದು' ಗುರುತಿಸಿದನು (ದಾನಿ 3:25). ರಾಜನು ಹೆಚ್ಚಾಗಿ ಹೇಳಲಾರನು. ಆದಾಗ್ಯೂ ಆ ನಾಲ್ಕನೇ ವ್ಯಕ್ತಿಯು ಯಾರೆಂದು ನಮಗೆ ಗೊತ್ತು. ಆತನು ಸೊದೋಮ್ ಮತ್ತು ಗೊಮೋರವನ್ನು ನಾಶಮಾಡಲು ಬಂದು ಅಬ್ರಹಾಮನೊಂದಿಗೆ ಮಾತಾಡಿದ್ದನು. ಯಬ್ಬೋಕ್ ಹೊಳೆಯ ಹತ್ತಿರ ಯಾಕೋಬನೊಂದಿಗೆ ಹೋರಾಡಿದ್ದನು. ಉರಿಯುವ ಪೊದೆಯೊಳಗಿಂದ ಮೋಶೆಗೆ ಕಾಣಿಸಿಕೊಂಡನು. ಆತನು ಅವತಾರಪೂರ್ವ ರೂಪಿನಲ್ಲಿದ್ದ ಯೇಸುಕ್ರಿಸ್ತನೇ ಆಗಿದ್ದನು. ತನ್ನ ಜನರು ತೊಂದರೆಯಲ್ಲಿದ್ದಾಗಲೆಲ್ಲ ದೇವರು ತನ್ನ ಜನರೊಂದಿಗೆ ನಿಲ್ಲುತ್ತಾನೆಂದು ತೋರಿಸಲು ಬಂದವನು. ಎಲೆನ್ ಜಿ ವೈಟಮ್ಮನವರು ಹೀಗೆ ಹೇಳುತ್ತಾರೆ. "ಆದರೆ ಕರ್ತನು ತನ್ನವರನ್ನು ಮರೆಯಲಿಲ್ಲ. ತನ್ನ ಸಾಕ್ಷಿಗಳು ಉರಿಯುವ ಆವಿಗೆ ಎಸೆಯಲ್ಪಟ್ಟಾಗ ರಕ್ಷಕನು ತಾನಾಗಿ ಅವರಿಗೆ ಕಾಣಿಸಿಕೊಂಡನು ಅವರೊಂದಿಗೆ ಆ ಬೆಂಕಿಯಲ್ಲಿ ನಡೆದಾಡಿದನು. ಶಾಖ ಮತ್ತು ಶೀತದ ಕರ್ತನ ಮುಂದೆ ಉರಿಯುವ ತನ್ನ ಸುಡುವ ಶಕ್ತಿಯನ್ನು ಕಳೆದುಕೊಂಡಿತು" – ಪ್ರಾಫೆಟ್ಸ್ ಅಂಡ್ ಕಿಂಗ್ಸ್, ಪುಟ 508, 509.

ಯೆಶಾಯದಲ್ಲಿ ದೇವರು ಹೇಳುವಂತೆ, "ನೀನು ಜಲರಾಶಿಯನ್ನು ಹಾದು ಹೋಗುವಾಗ ನಾನು ನಿನ್ನ ಸಂಗಡ ಇರುವೆನು; ನದಿಗಳನ್ನು ದಾಟುವಾಗ ಅವು ನಿನ್ನನ್ನು ಮುಣುಗಿಸವು; ಉರಿಯಲ್ಲಿ ನಡೆಯುವಾಗ ಕಂದದಿರುವಿ, ಜ್ವಾಲೆಯು ನಿನ್ನನ್ನು ದಹಿಸದು (ಯೆಶಾಯ 43:2).

ನಾವು ಇಂತಹ ಕಥೆಗಳನ್ನು ಬಹಳ ಪ್ರೀತಿಸಿದಾಗ್ಯೂ ಇದೇ ರೀತಿಯಾಗಿ

ಇತರರು ಅದ್ಭುತವಾಗಿ ತಮ್ಮ ನಂಬಿಕೆಯ ನಿಮಿತ್ತ ಉಂಟಾದ ಹಿಂಸೆಯಿಂದ ಪಾರಾಗದೆ ಹೋದಾಗ ನಮ್ಮಲ್ಲಿ ಪ್ರಶ್ನೆಗಳು ಮೂಡುತ್ತವೆ. ಅವರಿಗೆ ಯೆಶಾಯ, ಚೆಕರ್ಯರನ್ನು ಭಕ್ತಿ ಹೀನರಾದ ರಾಜರು ಕೊಲ್ಲಲ್ಪಟ್ಟಿದ್ದೂ ಸಹ ಅವರಿಗೆ ತಿಳಿದಿತ್ತು. ಪರಿಶುದ್ಧ ಚರಿತ್ರೆಯಾದ್ಯಂತ ನಾವು ವಾಸಿಸುವ ಇಂದಿನ ದಿನಗಳವರೆಗೂ ನಂಬಿಗಸ್ತ ಕ್ರೈಸ್ತರು ತಮ್ಮನ್ನು ಮುಗಿಸಿದ ಭಯಂಕರ ಕಷ್ಟಗಳನ್ನು ತಾಳಿಕೊಂಡರು. ಅವರಿಗೆ ಅದ್ಭುತವಾದ ಬಿಡುಗಡೆಯಲ್ಲ ಯಾತನಾಮಯ ಮರಣ ಒದಗಿತು. ಇಲ್ಲಿ ಈ ಸಂದರ್ಭದಲ್ಲಿ ನಂಬಿಗಸ್ತರು ಅದ್ಭುತವಾದ ಬಿಡುಗಡೆಯನ್ನು ಹೊಂದಿದರು. ಆದರೆ, ಇದು ಯಾವಾಗಲೂ ಹೀಗೆಯೇ ನಡೆಯುವುದಿಲ್ಲ ಎಂಬುದು ನಮಗೆ ಗೊತ್ತು.

ಇನ್ನೊಂದು ಬಗೆಯಾಗಿ ಇಲ್ಲಿ ಅವರ ಗತಿ ಏನೇ ಆದರೂ ದೇವರ ನಂಬಿಗಸ್ತರು ಹೊಂದುವ ಅದ್ಭುತವಾದ ಬಿಡುಗಡೆ ಯಾವುದು? (1 ಕೊರಿಂಥ 15:12–26ನ್ನು ನೋಡಿರಿ).

**ಗುರುವಾರ** **ಜನವರಿ 23**

## ಅಂತಹ ನಂಬಿಕೆಯಲ್ಲಿರುವ ರಹಸ್ಯ

ಶದ್ರಕ್, ಮೇಶಕ್ ಅಬೇದ್‌ನೆಗೊರ ಅನುಭವವನ್ನು ಆಲೋಚಿಸುವಾಗ ಅವರ ಬಲವಾದ ನಂಬಿಕೆಯ ರಹಸ್ಯವೇನು? ಎಂಬುದಾಗಿ ನಮ್ಮನ್ನು ನಾವು ಕೇಳಿಕೊಳ್ಳಬಹುದು. ಈ ಯೌವನಸ್ಥರು ಪ್ರತಿಮೆಯನ್ನು ಪೂಜಿಸುವ ಬದಲಾಗಿ ಬೆಂಕಿಯಲ್ಲಿ ಜೀವಂತವಾಗಿ ಸುಟ್ಟುಹೋಗುವುದಕ್ಕೆ ಹೇಗೆ ಸಿದ್ಧರಾಗಿದ್ದರು? ರಾಜನಿಗೆ ತಲೆಬಾಗಿ ಆತನ ಆದೇಶಕ್ಕೆ ಒಳಗಾಗುವ ಎಲ್ಲಾ ರೀತಿಯನ್ನು ವೈಚಾರಿಕಗೊಳಿಸುವ ಬಗ್ಗೆ ಆಲೋಚಿಸಿರಿ. ತಾವು ಸಾಯುತ್ತೇವೆಂಬ ಅರಿವಾದಾಗಲೂ ದೃಢವಾಗಿ ನಿಂತುಕೊಂಡರು.

ಓದಿರಿ : ಇಬ್ರಿಯ 11ನೇ ಅಧ್ಯಾಯ ನಂಬಿಕೆಯನ್ನು ಕುರಿತು ಇದು ನಮಗೆ ಏನನ್ನು ಬೋಧಿಸುತ್ತದೆ?

ಅಂತಹ ನಂಬಿಕೆಯನ್ನು ಬೆಳೆಸಿಕೊಳ್ಳಲು ನಂಬಿಕೆಯೆಂದರೆ ಏನೆಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು.

ಕೆಲವರಿಗೆ ನಂಬಿಕೆಯ ಪರಿಮಾಣದ ಗ್ರಹಿಕೆಯಿರುತ್ತದೆ. ಅವರು ತಮ್ಮ ನಂಬಿಕೆಯನ್ನು ದೇವರಿಂದ ತಮಗೆ ದೊರಕಿದ ಉತ್ತರಗಳಿಂದ ಅಳೆಯುತ್ತಾರೆ. ಅವರು ಮಾರಾಟ ಮಳಿಗೆಗೆ ಹೋದಾಗ ತಮ್ಮ ವಾಹನಕ್ಕೆ ನಿಲ್ಲಿಸುವ ಸ್ಥಳಕ್ಕಾಗಿ ಪ್ರಾರ್ಥಿಸುತ್ತಾರೆ. ಬರುತ್ತಿದ್ದಾಗಲೇ ಸ್ಥಳ ಸಿಕ್ಕಿದರೆ ತಮಗೆ ಬಲವಾದ ನಂಬಿಕೆ ಇದೆ ಎಂದು ಎಣಿಸುತ್ತಾರೆ. ಒಂದು ವೇಳೆ ಸ್ಥಳ ಸಿಗದೆ ಹೋದರೆ ದೇವರು ನಮ್ಮ ಪ್ರಾರ್ಥನೆಯನ್ನು ಆಲಿಸುವಷ್ಟು ಬಲವಾದ ನಂಬಿಕೆ ತಮಗಿಲ್ಲವೆಂದು ಕೊಳ್ಳುತ್ತಾರೆ. ಈ ತೆರನಾದ ನಂಬಿಕೆಯು ಬಹಳ ಅಪಾಯಕರವಾದದ್ದು ಯಾಕೆಂದರೆ ಇಂತಹ ನಂಬಿಕೆಯು ದೇವರನ್ನೇ ನಡೆಸಲು ಪ್ರಯತ್ನಿಸುತ್ತದೆ. ಆತನ ಸಾರ್ವಭೌಮತ್ವವನ್ನೂ ಜ್ಞಾನವನ್ನೂ ಪರಿಗಣಿಸುವುದಿಲ್ಲ.

ದಾನಿಯೇಲ ಮತ್ತು ಆತನ ಸ್ನೇಹಿತರು ಪ್ರದರ್ಶಿಸಿದ ನಿಜವಾದ ನಂಬಿಕೆಯನ್ನು ದೇವರೊಂದಿಗೆ ಅವರಿಗಿದ್ದ ಸಂಬಂಧದ ಮೇಲೆ ಅಳೆಯಬಹುದು, ದೇವರಲ್ಲಿ ಸಂಪೂರ್ಣವಾಗಿ ವಿಶ್ವಾಸವಿಡುವುದರ ಪ್ರಯುಕ್ತ ಇಂತಹ ನಂಬಿಕೆಯು ಹುಟ್ಟುತ್ತದೆ. ಯಥಾರ್ಥವಾದ ನಂಬಿಕೆಯುಳ್ಳವರು ದೇವರ ಚಿತ್ತವು ತಮ್ಮ ಚಿತ್ತಕ್ಕೆ ಬಾಗುವಂತೆ ಮಾಡುವುದಿಲ್ಲ. ಆದರೆ ಹಾಗೆ ಮಾಡುವ ಬದಲು ತಮ್ಮ ಚಿತ್ತವನ್ನು ದೇವರ ಚಿತ್ತಕ್ಕೆ ಒಪ್ಪಿಸಿಕೊಡುತ್ತಾರೆ.

ಈ ಮೂವರು ಇಬ್ರಿಯರು ರಾಜನಿಗೆ ವಿರೋಧವಾಗಿ ನಿಂತಾಗ ದೇವರು ತಮ್ಮ ನಂಬಿಕೆಗೆ ನಿಖರವಾಗಿ ಏನನ್ನು ಇಟ್ಟಿದ್ದಾನೆಂದು ಅವರಿಗೆ ತಿಳಿದಿರಲಿಲ್ಲ. ಅವರು ಪರಿಣಾಮಗಳನ್ನು ಲೆಕ್ಕಿಸದೆ ಸರಿಯಾದುದನ್ನು ಮಾಡಲು ನಿರ್ಧಾರ ತೆಗೆದುಕೊಂಡರು. ಇದು ತಾನೆ ನಂಬಿಕೆಯ ನಿಜವಾದ ಗುಣವನ್ನು ತೋರಿಸುತ್ತದೆ. ನಾವು ನಮಗೆ ಬೇಕಾದುದನ್ನು ದೇವರಿಂದ ಕೇಳಿಸಿಕೊಂಡು ಆತನು ನಮಗೆ ಉತ್ತಮವಾದದ್ದನ್ನೇ ಕೊಡುತ್ತಾನೆಂದು ಭರವಸೆವಿಡುವುದು ನಿಜವಾದ ನಂಬಿಕೆಯ ಲಕ್ಷಣವಾಗಿದೆ. ಅನೇಕ ಸಲ ಏನಾಗುತ್ತದೆ, ಯಾಕಾಗುತ್ತದೆ ಎಂಬುದು ನಮಗೆ ತಿಳಿದಿರುವುದಿಲ್ಲ.

ನಾವು ನಮ್ಮ ದೈನಂದಿನ ಜೀವಿತದಲ್ಲಿ ಸಣ್ಣಸಣ್ಣ ವಿಷಯಗಳಲ್ಲಿಯೂ ನಮ್ಮ ನಂಬಿಕೆಯನ್ನು ಪ್ರದರ್ಶಿಸಿ ಕಾಲಾಂತರದಲ್ಲಿ ಇನ್ನೂ ದೊಡ್ಡದೊಡ್ಡ ಸವಾಲುಗಳನ್ನು

ಎದುರಿಸುವಂತೆ ಅದನ್ನು ಚೆನ್ನಾಗಿ ಬೆಳೆಸುವ ವಿಧಾನಗಳಾವುವು? ಸಣ್ಣ ವಿಷಯಗಳಲ್ಲಿ ಬರುವ ಶೋಧನೆಗಳು ಅನೇಕ ರೀತಿಯಲ್ಲಿ ಬಹಳ ಮುಖ್ಯವಾದವುಗಳಾಗಿವೆ ಏಕೆ?

**ಶುಕ್ರವಾರ** **ಜನವರಿ 24**

**ಹೆಚ್ಚಿನ ಚಿಂತನೆ :** ದೂರಾ ಬಯಲಿನಲ್ಲಿ ಇಬ್ರಿಯ ಯೌವನಸ್ಥರಿಗಾದ ಅನುಭವದಿಂದ ಕಲಿಯಬೇಕಾದ ಪಾಠಗಳು ಬಹಳ ಮುಖ್ಯವಾದವುಗಳಾಗಿವೆ. ಇಂದಿನ ದಿನಗಳಲ್ಲಿ ದೇವರ ಸೇವಕರು ಕೆಟ್ಟದ್ದನ್ನು ಮಾಡದ ಮುಗ್ಧರಾದಾಗ್ಯೂ ಸೈತಾನನಿಂದ ಪ್ರೇರಣೆ ಪಡೆದವರ ಕೈಗಳಿಂದ ಆಪಾದನೆ, ಅವಮಾನಗಳನ್ನು ಹೊಂದುವುದನ್ನು ನೋಡುತ್ತೇವೆ. ವಿಶೇಷವಾಗಿ ಯಾವಾತನು ನಾಲ್ಕನೇ ಆಜ್ಞೆಯಾದ ಸಬ್ಬತ್ತನ್ನು ಪರಿಶುದ್ಧವಾಗಿ ಕೈಗೊಂಡು ನಡೆಯುತ್ತಾನೋ ಅವನ ಮೇಲೆ ಮನುಷ್ಯನ ಮತ್ಸರ ಏಳುತ್ತದೆ; ಕಡೆಯದಾಗಿ ಇವರು ಮರಣಕ್ಕೆ ಯೋಗ್ಯರೆಂಬ ಬಹಿರಂಗವಾಗಿ ಆಪಾದಿಸುವ ಸಾರ್ವಕಾಲಿಕ ಶಾಸನವು ಹೊರಡುತ್ತದೆ.

ದೇವಜನರು ಜೀವನದಲ್ಲಿ ಕರೆಕರೆಯನ್ನು ಅನುಭವಿಸುವಾಗ ಎಂದಿಗೂ ತಪ್ಪದ ನಂಬಿಕೆಯ ಅವಶ್ಯಕತೆಯಿರುತ್ತದೆ. ಆತನ ಮಕ್ಕಳಿಗೆ ದೇವರೊಬ್ಬನೇ ತಮ್ಮ ಆರಾಧನೆಯ ವಸ್ತು, ಯಾವ ಪ್ರತಿಫಲವಾಗಲೀ, ಜೀವಕ್ಕೆ ಬರುವ ಗಂಡಾಂತರವಾಗಲಿ ಅವರನ್ನು ವಿಗ್ರಹಾರಾಧನೆ ಮಾಡುವುದಕ್ಕೆ ಸಣ್ಣದಾಗಿಯೂ ಪ್ರೇರೇಪಿಸಲಾರವು. ನಿಷ್ಠೆಯುಳ್ಳ ಹೃದಯಕ್ಕೆ ಪಾಪಿಯಾದ ಮಿತಿಯುಳ್ಳ ಮನುಷ್ಯ ಆಜ್ಞೆಗಳು ನಿತ್ಯನಾದ ದೇವರ ಮಾತುಗಳಲ್ಲಿ ಸಾಧಾರಣವಾದವುಗಳಾಗಿ ಮುಳುಗಿ ಹೋಗುತ್ತವೆ. ಫಲಿತಾಂಶವು ಸೆರೆಮನೆಯಾಗಿರಲಿ ಅಥವಾ ಗಡಿಪಾರಾಗಿರಲಿ ಅಥವಾ ಮರಣವೇ ಆಗಿರಲಿ ಸತ್ಯವು ಪಾಲಿಸಲ್ಪಡುವುದು" ಎಲೆನ್ ಜಿ ವೈಟಮ್ಮನವರ ಪ್ರಾಫೆಟ್ಸ್ ಅಂಡ್ ಕಿಂಗ್ಸ್, ಪುಟ 512, 513.

## ಚರ್ಚಿಸಬೇಕಾದ ಪ್ರಶ್ನೆಗಳು

1. 1 ಪೇತ್ರ 1:3–9ನ್ನು ಓದಿರಿ. ದೇವರು ಕೆಲವರನ್ನು ಹಿಂಸೆಗಳಿಂದ ಪಾರು ಮಾಡುತ್ತಾನೆ ಮತ್ತೆ ಕೆಲವರನ್ನು ಪಾರುಮಾಡುವುದಿಲ್ಲ ಏಕೆ? ಇಂತಹ

ಪ್ರಶ್ನೆಗಳಿಗೆ ನಾವು ಇದನ್ನು ಈವಾಗ ಅನುಭವಿಸುತ್ತಿಲ್ಲವೆಂಬುದು ಸರಿಯಾದ ಉತ್ತರವೆ? ನಮಗೆ ಅದ್ಭುತವಾದ ಬಿಡುಗಡೆಯು ಸಿಗದೆ ಹೋದಾಗ್ಯೂ, ಹತಾಶೆಯಲ್ಲಿಯೂ ನಾವು ದೇವರ ಒಳ್ಳೆಯತನದಲ್ಲಿ ಭರವಸೆ ಇಡಬೇಕು ಏಕೆ?

2. ಈ ಪ್ರಸಂಗವು ಇಬ್ರಿಯ ಯೌವನಸ್ಥರು ಉರಿಯುವ ಆವಿಗೆಯಲ್ಲಿ ಸುಟ್ಟು ಹೋಗುವ ಘಟನೆಯಾಗಿ ಅಂತ್ಯಗೊಂಡಿದ್ದರೂ ಇದರಿಂದ ಇನ್ನೂ ಸಹ ಯಾವ ಪಾಠಗಳನ್ನು ನಾವು ಪಡೆದುಕೊಳ್ಳಬಹುದಿತ್ತು?

3. ನಾವು ಅಂತ್ಯದಿನಗಳಲ್ಲಿ ನಡೆಯುವ ಘಟನೆಗಳ ಬಗ್ಗೆ ತಿಳುವಳಿಕೆಯುಳ್ಳವರಾಗಿ ನಾವು ಯಾರನ್ನು ಆರಾಧಿಸುತ್ತೇವೆ ಎಂಬುದಕ್ಕೆ ಗುರುತೇನು? ಸಬ್ಬತ್ತು ನಮಗೆ ಎಷ್ಟುಮುಖ್ಯವಾದುದು ಎಂಬುದಕ್ಕೆ ಇದು ಏನನ್ನು ಹೇಳುತ್ತದೆ?

4. ಲೂಕ 16:10ನ್ನು ಓದಿರಿ. ಯೇಸುಕ್ರಿಸ್ತನು ಹೇಳುವ ಮಾತುಗಳು ನಾವು ನಿಜವಾಗಿ ನಂಬಿಕೆಯಿಂದ ಬಾಳುತ್ತೇವೆ ಎಂಬುದರ ಅರ್ಥವನ್ನು ತಿಳಿದುಕೊಳ್ಳಲು ಹೇಗೆ ಸಹಾಯ ಮಾಡುತ್ತವೆ?

5. ಮತ್ತೆ ದಾನಿಯೇಲ 3:15ನ್ನು ಓದಿರಿ, ಅಲ್ಲಿ ನೆಬೂಕದ್ನೆಚ್ಚರನು "ನಿಮ್ಮನ್ನು ನನ್ನ ಕೈಯೊಳಗಿಂದ ಬಿಡಿಸಬಲ್ಲ ದೇವರು ಯಾರು?" ಎಂದು ಹೇಳುತ್ತಾನೆ. ಈ ಪ್ರಶ್ನೆಗೆ ನೀವು ಹೇಗೆ ಉತ್ತರ ಹೇಳುವಿರಿ?